ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 24.10.2024.

**ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಎಂ.ಜೆ.ಪಿ. ವಕೀಲರಿಂದಃ

ನಾನು ಶಿಕ್ಷಣ ಕಲಿತಿರುವುದಿಲ್ಲ, ನನಗೆ ಓದಲು, ಬರೆಯಲು ಬರುವುದಿಲ್ಲ. ನನ್ನ ಮುತ್ತಜ್ಜ ಬಸಪ್ಪ ರವರಿಗೆ 5 ಜನ ಮಕ್ಕಳು ಎಂದರೆ ಸರಿ. ಅವರೆಂದರೇ, ಚಂದಪ್ಪ, ರಾಣಪ್ಪ, ಧರ್ಮಣ್ಣ, ಸಂಗಪ್ಪ ಮತ್ತು ಶಿವಲಿಂಗಪ್ಪ ಇರುತ್ತಾರೆ. ನಾನು ಹಾಗೂ 5 ರಿಂದ 9ನೇ ಪ್ರತಿವಾದಿಗಳು ಚಂದಪ್ಪನ ಮೊಮ್ಮಕ್ಕಳು ಇರುತ್ತೇವೆ ಎಂದರೆ ಸರಿ. ನನ್ನ ಮುತ್ತಜ್ಜ ಬಸಪ್ಪ ಅಪ್ಪುಗಿ ರವರ ಹೆಸರಿನಲ್ಲಿ ಮತ್ತು ನನ್ನ ಅಜ್ಜ ಚಂದಪ್ಪ ಹೆಸರಿನಲ್ಲಿ ಜಮೀನು ಇದ್ದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ಅದೇ ರೀತಿ ಜಮೀನುಗಳನ್ನು ಖರೀದಿ ಮಾಡಿದ ಬಗ್ಗೆ ದಾಖಲೆಗಳು ಇಲ್ಲ ಎಂದರೆ ಸರಿ. ದಾವೆಯಲ್ಲಿ ಸರ್ವೆ

ನಂ.272/2 ಇದು 8 ಎಕರೆ 17 ಗುಂಟೆ ಬರೆದಿರುತ್ತೇವೆ ಎಂದರೆ ಸರಿ. ಸದರಿ ಸರ್ವೆ ನಂಬರದಲ್ಲಿ ನಮ್ಮ ಹೆಸರಿನಲ್ಲಿ ಪಹಣಿಗಳು ಇರುವುದಿಲ್ಲ. ಯಾವುದೇ ದಾಖಲೆ ಇದ್ದ ಪಕ್ಷದಲ್ಲಿ ಮಾಲಿಕ ಅಂತ ಹೇಳುತ್ತಾರೆ ಎಂದರೆ ಸರಿ.

ನಿಪಿ-1ರ ದಾಖಲೆ 1ನೇ ಪ್ರತಿವಾದಿ ಹನುವಂತ ತಂದೆ ಸಂಗಪ್ಪ ಎಂದು ಇದೆ ಹಾಗೂ ಅವರ ಹೆಸರಿನಲ್ಲಿ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು 30-35 ವರ್ಷಗಳಿಂದ ನಾವೆ ಕಬ್ಜೆಯಲ್ಲಿ ಇರುತ್ತೇವೆ ಎಂದು ನುಡಿಯುತ್ತಾರೆ. ನಿಪಿ-1ರ ಆಸ್ತಿಯ ಮೇಲೆ 1ನೇ ಪ್ರತಿವಾದಿ ನಿಂಬರ್ಗಾ ಎಸ್.ಬಿ.ಐ. ಬ್ಯಾಂಕ್‌ದಲ್ಲಿ ರೂ.1,40,000/- ಸಾಲ ಪಡೆದಿರುತ್ತಾರೆ ಎಂದರೆ ಸರಿ. 1ನೇ ಪ್ರತಿವಾದಿ ಸಾಲ ಪಡೆದುಕೊಂಡಿದ್ದರ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸಾಲ ಪಡೆದುಕೊಂಡ ಬಗ್ಗೆ ದಾವೆಯಲ್ಲಿ ಬರೆದಿರುವುದಿಲ್ಲ, ಏಕೆಂದರೆ ಪಹಣಿಯಲ್ಲಿ ಇರುತ್ತದೆ ಆ ಕಾರಣ ಬರೆದಿಲ್ಲ. ನಾನು 1ನೇ ಪ್ರತಿವಾದಿಗೆ ನಮ್ಮ ವಕೀಲರ ಮುಖಾಂತರ ನೋಟೀಸ್ ಕಳುವುಹಿಸಿದ್ದೆ ಎಂದರೆ ಸರಿ. ಒಟ್ಟು ಎರಡು ನೋಟೀಸ್ ಕಳುವುಹಿಸಿದ್ದೇವು ಎಂದರೆ ನನಗೆ ಮಾಹಿತಿ ಇಲ್ಲ. 1ನೇ ಪ್ರತಿವಾದಿ ಸದರಿ ನೋಟೀಸ್‌ಗಳಿಗೆ ಮರು ಉತ್ತರ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನಾವು ದಾವೆಯಲ್ಲಿ ಹೇಳಿರುವಂತೆ ಜೆಂಟಿ ಕುಟುಂಬದ ಆಧಾಯದಿಂದ ಖರೀದಿಸಿರುತ್ತೇವೆ ಎಂದು ಹೇಳಿದ್ದು, ಎಷ್ಟು ಹಣಕ್ಕೆ ಖರೀದಿಸಿರುತ್ತೇವೆ ಎಂದು ನನಗೆ ಗೊತ್ತಿಲ್ಲ ಹಾಗೂ ಆ ಬಗ್ಗೆ ದಾವೆಯಲ್ಲಿ ಬರೆದಿಲ್ಲ ಎಂದರೆ ಸರಿ. ಆದರೆ ನಾನು ಆಗ ಚಿಕ್ಕವನು ಇದ್ದೆ. ಖರೀದಿ ಮಾಡಿದ ಬಗ್ಗೆ ನಾನು ಚಿಕ್ಕವನು ಇರುವ ಕಾರಣ ನನಗೆ ಅಷ್ಟು ಮಾಹಿತಿ ಇಲ್ಲ ಎಂದರೆ ಸರಿ. ಮೂಲ ಪುರುಷ ಬಸಪ್ಪನ 5 ಜನ ಮಕ್ಕಳು 1970ರಲ್ಲಿ ತಮ್ಮ-ತಮ್ಮಗಳ ಮದ್ಯ ಬೇರೆಯಾಗಿರುತ್ತಾರೆ ಎಂದರೆ ಸರಿ. ಆದರೆ ಒಟ್ಟು 4 ಜನ ಮಕ್ಕಳು ಕೂಡಿ ಮೂರು ಹೊಲ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಜಂಟಿಯಾಗಿ ಖರೀದಿ ಮಾಡಿಕೊಂಡಿದ್ದರ ಬಗ್ಗೆ ಯಾವುದೇ ಕಾಗದ ಪತ್ರಗಳು ಇರುವುದಿಲ್ಲ. 1ನೇ

ಪ್ರತಿವಾದಿ ಸರ್ವೆ ನಂ.272/2 ಒಟ್ಟು 14 ಎಕರೆ 37 ಗುಂಟೆ ಜಮೀನನ್ನು ಸಂಗಪ್ಪ ತಂದೆ ಗುರುಪಾದಪ್ಪ ಬೆಳ್ಳೆ ರವರಿಂದ ಖರೀದಿಸಿರುತ್ತಾರೆ ಎಂದರೆ ಸರಿ.

1ನೇ ಪ್ರತಿವಾದಿ ತನ್ನ ಸ್ವಂತ ಹಣದಿಂದ ಮೇಲೆ ಹೇಳಿದ ಜಮೀನನ್ನು ಖರೀದಿ ಮಾಡಿದ್ದು, ಅದರಲ್ಲಿ ನಮ್ಮಗಳ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಹಕ್ಕು ಇದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ಮತ್ತು ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾವು ಕಬ್ಜೆಯಲ್ಲಿ ಇರುತ್ತೇವೆ ಎಂದು ಹೇಳಿದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ಸರ್ವೆ ನಂ.272/2ರ 5 ಎಕರೆ ಜಮೀನಿನ ಮಾಲಿಕರು 2ನೇ ವಾದಿ ಇರುತ್ತಾರೆ ಎಂದು ನಾವು ಹೇಳಿದ್ದು, ಆದರೆ ಅವರ ಹೆಸರಿನಲ್ಲಿ ಪಹಣಿ ಇರುವುದಿಲ್ಲ. ದಾವಾ ಸ್ವತ್ತುಗಳಿಗೂ ಮತ್ತು ನಮಗೂ ಯಾವುದೇ ಸಂಬಂಧ ಇರದೇ ಇದ್ದರೂ ಕೂಡಾ 1ನೇ ಪ್ರತಿವಾದಿ ಜಮೀನನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಅದೇ ರೀತಿ 1ನೇ ಪ್ರತಿವಾದಿ ಕೂಡಾ ನನ್ನ ವಿರುದ್ಧ ನಿರ್ಬಂಧ ಕಾದ್ನೆ ದಾವೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ಈ ಕೇಸಿನ ಜೊತೆ ನಡೆದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

1985ರವರೆಗೂ ನಾವು ಜಂಟಿ ಕುಟುಂಬದಲ್ಲಿ ಇದ್ದೆವು ಹಾಗೂ ಜಂಟಿ ಕುಟುಂಬದ ಆಧಾಯದಿಂದ ಖರೀದಿಸಿರುತ್ತೇವೆ ಎಂದು ಹೇಳಿದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ಅದೇ ರೀತಿ 2020ರಲ್ಲಿ ಕೂಡಾ ನಾನು 1ನೇ ಪ್ರತಿವಾದಿ ಜೊತೆ ತಕರಾರು ಮಾಡಿಕೊಂಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರೇ ನನ್ನ ಜೊತೆ ಜಗಳ ಮಾಡಿಕೊಂಡಿದ್ದರು ಎಂದು ನುಡಿಯುತ್ತಾರೆ. ದಾವಾ ಸ್ವತ್ತು 1ನೇ ಪ್ರತಿವಾದಿಯ ಸ್ವಂತ ಗಳಿಸಿದ ಆಸ್ತಿ ಆಗಿರುವ ಕಾರಣ ಅದರಲ್ಲಿ ನಮ್ಮಗಳ ಯಾವುದೇ ಹಕ್ಕುಸತಾ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-9ರ ಖರೀದಿ ಪತ್ರ 1ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ಅದರಲ್ಲಿ ಜಂಟಿ ಕುಟುಂಬದ ಆಧಾಯದಿಂದ ಖರೀದಿ

ಮಾಡಿರಿಎತ್ತಾರೆ ಎಂದು ಎಲ್ಲಿಯು ಬರೆದಿಲ್ಲ ಎಂದರೆ ಸರಿ. ಅದೇ ರೀತಿ ನಿಪಿ-9ರ ಖರೀದಿ ಪತ್ರದಲ್ಲಿ ಸಾಕ್ಷಿದಾರರ ಕಾಲಂದಲ್ಲಿ ನಮ್ಮಗಳದಾಗಲಿ, ನಮ್ಮ ತಂದೆಯವರದಾಗಲಿ ಹೆಸರುಗಳು ಇಲ್ಲ ಎಂದರೆ ಸರಿ. ದಾವಾ ಸ್ವತ್ತುಗಳು ನಮಗೆ ಯಾವುದೇ ರೀತಿ ಸಂಬಂಧ ಇಲ್ಲದೇ ಇದ್ದರೂ ಕೂಡಾ, 1ನೇ ಪ್ರತಿವಾದಿ ತೊಂದರೆ ಕೊಡಬೇಕೆಂಬ ದುರುದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**